ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **22/2022** ಸಿ.ಡಬ್ಲ್ಯೂ **07 / ಪಿ.ಡಬ್ಲ್ಯೂ 05**

| | | |
|---|---|---|
| ಸಾಕ್ಷಿಯ ಹೆಸರು | - ಪರಶುರಾಮ್ | ದಿನಾಂಕ 07-04-2025 |
| ತಂದೆಯ ಹೆಸರು | - ನಿಂಗಪ್ಪ | ರಂದು ಪ್ರಮಾಣ ವಚನ |
| ವಯಸ್ಸು | - 39 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಲಾರಿ ಚಾಲಕ | |
| ವಾಸ ಸ್ಥಳ | - ಸಂಡೂರು | |

## ಮುಖ್ಯ ವಿಚಾರಣೆ ಸಸಅ ರವರಿಂದ

* * * *

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಸುಮಾರು 2 ವರ್ಷದ ಹಿಂದೆ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಕೃತ್ಯಸ್ಥಳ ಮತ್ತು ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ 2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2-ಬಿ ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನಮ್ಮ ಸಮಕ್ಷಮ ಏನನ್ನು ಜಪ್ತುಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ದಿಃ **24-08-2021** ರಂದು ಮಧ್ಯಾಹ್ನ **1-00** ರಿಂದ **2-00** ಗಂಟೆಗೆ ನನ್ನ ಮತ್ತು ಚಾ.ಸಾ **6** ರವರ ಸಮಕ್ಷಮ ಸಂಡೂರು ಪಟ್ಟಣದ ಪುರಸಭೆಯ ಬಸ್ ನಿಲ್ದಾಣದ ಬಳಿ ಇರುವ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಸದರಿ ಸ್ಥಳದಲ್ಲಿ ಮಟ್ಕಾ ಜೂಜಾಟ ಆಡುತ್ತಿದ್ದ ಬಗ್ಗೆ ನಿ.ಪಿ **2** ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯ ಅಂಗಶೋಧನೆ ಮಾಡುತ್ತಿದ್ದಾಗ ಆತನು ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. **1**ನೇ ಆರೋಪಿಯು ಚಾ,ಸಾ **2** ಮತ್ತು **3** ರವರಿಗೆ ಕೈಯಿಂದ ಹೊಡೆದು ಓಡಿ ಹೋಗಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯ ಬಳಿ ಮಟ್ಕಾ ಬರೆದ ಚೀಟಿ, ಒಂದು ಪೆನ್ ಮತ್ತು ರೂ. **1,230/-** ಹಣ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯು ನಮ್ಮ ಸಮಕ್ಷಮ ಮಟ್ಕಾ ಚೀಟಿಯನ್ನು

ಪೊಲೀಸರು ನೋಡುತ್ತಿದ್ದಾಗ ಅದನ್ನು ಕಸಿದುಕೊಂಡು ಹರಿದುಹಾಕಿರುತ್ತಾನೆ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಿ.ಪಿ 2 ರಲ್ಲಿ ಬರೆದಿರುವ ವಿಷಯ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಸಿ.ಜೆ ಮತ್ತು ಪ್ರ.ದ.ನ್ಯಾ.ದಂ., ಸಂಡೂರು.**

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

ಸಿ. ಸಿ. ಸಂಖ್ಯೆ **22/2022** ಸಿ.ಡಬ್ಲ್ಯೂ **06 / ಪಿ.ಡಬ್ಲ್ಯೂ 04**

| | | |
|---|---|---|
| ಸಾಕ್ಷಿಯ ಹೆಸರು | - ವೀರಕುಮಾರಸ್ವಾಮಿ | ದಿನಾಂಕ 07-04-2025 |
| ತಂದೆಯ ಹೆಸರು | - ಯಂಕಪ್ಪ | ರಂದು ಪ್ರಮಾಣ ವಚನ |
| ವಯಸ್ಸು | - 52 ವರ್ಷ | ಮಾಡಿಸಲಾಯಿತು. |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಸಂಡೂರು | |

**ಮುಖ್ಯ ವಿಚಾರಣೆ ಸಸಅ ರವರಿಂದ**

* * * *

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿರುವುದಿಲ್ಲ. ಸುಮಾರು 2 ವರ್ಷದ ಹಿಂದೆ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ಕೃತ್ಯಸ್ಥಳ ಮತ್ತು ಜಪ್ತು ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2-ಎ ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನಮ್ಮ ಸಮಕ್ಷಮ ಏನನ್ನು ಜಪ್ತುಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು.**

**ಪಾಟೀ ಸವಾಲು: ಮಾನ್ಯ ಸ.ಸ.ಅ. ರವರಿಂದ.**

ದಿಃ **24-08-2021** ರಂದು ಮಧ್ಯಾಹ್ನ **1-00** ರಿಂದ **2-00** ಗಂಟೆಗೆ ನನ್ನ ಮತ್ತು ಚಾ.ಸಾ **7** ರವರ ಸಮಕ್ಷಮ ಸಂಡೂರು ಪಟ್ಟಣದ ಪುರಸಭೆಯ ಬಸ್ ನಿಲ್ದಾಣದ ಬಳಿ ಇರುವ ಸಾರ್ವಜನಿಕ ಸ್ಥಳದಲ್ಲಿ ಆರೋಪಿತರು ಸದರಿ ಸ್ಥಳದಲ್ಲಿ ಮಟ್ಕಾ ಜೂಜಾಟ ಆಡುತ್ತಿದ್ದ ಬಗ್ಗೆ ನಿ.ಪಿ **2** ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯ ಅಂಗಶೋಧನೆ ಮಾಡುತ್ತಿದ್ದಾಗ ಆತನು ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. **1**ನೇ ಆರೋಪಿಯು ಚಾ,ಸಾ **2** ಮತ್ತು **3** ರವರಿಗೆ ಕೈಯಿಂದ ಹೊಡೆದು ಓಡಿ ಹೋಗಲು ಪ್ರಯತ್ನಿಸಿರುತ್ತಾನೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯ ಬಳಿ ಮಟ್ಕಾ ಬರೆದ ಚೀಟಿ, ಒಂದು ಪೆನ್ ಮತ್ತು ರೂ. **1,230/-** ಹಣ ಜಪ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ತದ ನಂತರ **1**ನೇ ಆರೋಪಿಯು ನಮ್ಮ ಸಮಕ್ಷಮ ಮಟ್ಕಾ ಚೀಟಿಯನ್ನು

ಪೊಲೀಸರು ನೋಡುತ್ತಿದ್ದಾಗ ಅದನ್ನು ಕಸಿದುಕೊಂಡು ಹರಿದುಹಾಕಿರುತ್ತಾನೆ ಎಂದರೆ ಸರಿಯಲ್ಲ. ಪೋಲಿಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಿ.ಪಿ 2 ರಲ್ಲಿ ಬರೆದಿರುವ ವಿಷಯ ಓದಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

**ಸಿ.ಜೆ ಮತ್ತು ಪ್ರ.ದ.ನ್ಯಾ.ದಂ., ಸಂಡೂರು.**